ಸೀಟಿಗೆ ಸುಮಾರಾಗಿರುವ ವ್ಯಕ್ತಿಯೊಂದು ಬಂದು ಕೂತಿದ್ದರಿಂದ ಕೆಂಪಣ್ಣ ಪರವಾಗಿಲ್ಲ ಎಂದುಕೊಂಡು ತನ್ನ ಸೀಟಿಗೆ ಒರಗಿದ.

ಶುಕ್ರವಾರವಾದ ಇಂದು ಕೆಂಪಣ್ಣ, ನಗರದಿಂದ ಹಳ್ಳಿಗೆ ಮಟ ಮಟ ಮಧ್ಯಾಹ್ನವೇ ಪ್ರಯಾಣ ಬೆಳೆಸಿದ್ದ. ಸುಮಾರು ಎರಡು ಗಂಟೆ ಪ್ರಯಾಣಿಸಿ ಊರು ತಲುಪಬೇಕಿತ್ತು. ನಿನ್ನೆಯೇ ತಾನು ಕೆಲಸ ಮಾಡುವ ಇಲಾಖೆಯ ವ್ಯವಸ್ಥಾಪಕರಿಗೆ ಅರ್ಜಿ ವಗಾಯಿಸಿ ಇಂದಿಗೆ ರಜೆ ಪಡೆದುಕೊಂಡಿದ್ದ. ನಾಳೆ ಹೇಗಿದ್ದರೂ ಸೆಕೆಂಡ್ ಸಾಟರ್ಡೆ, ಭಾನುವಾರವೂ ಸೇರಿದರೆ ಮೂರುದಿನ ಸರಣಿ ರಜೆ ಸಿಕ್ಕಂತಾಗುತ್ತದೆ, ಹಿಡಿದ ಕೆಲಸವನ್ನು ಸಾಧಿಸಲು ಅನುಕೂಲವಾಗುತ್ತದೆ ಎಂಬುದು ಕೆಂಪಣ್ಣನ ಎಣಿಕೆಯಾಗಿತ್ತು. ಇಂದಿನ ಇಡೀ ದಿನ ರಜೆಯ ಮೇಲಿದ್ದರೂ ಅಂಗೆ ಮಾಗಾಡಿ ಇಂಗೆ ಮಾಗಾಡಿ ಮಧ್ಯಾಹ್ನ ಮಾಡಿಕೊಂಡೇ ಹೊರಟಿದ್ದ. ಕೆಂಪಣ್ಣನ ಆಲೋಚನೆ ಸಂಜೆ ಮಾಡಿಕೊಂಡು ಮನೆ ತಲುಪುವುದು ಒಳ್ಳೆಯದು ಎಂಬುದಾಗಿತ್ತು.

ಕೆಂಪಣ್ಣ ಕಳೆದ ಮೂರು ತಿಂಗಳಿಂದ ಸಿಂಗಲ್ ಬೆಡ್ರೂಮಿನ ಆ ಮನೆಯಲ್ಲಿ ಒಂಟಿಯಾಗಿ ಒಂದರ್ಥದಲ್ಲಿ ಜಾಲಿಯಾಗೇ ಇದ್ದ. ಬೆಳಗ್ಗೆ ಎಂಟರವರೆಗೆ ಮಲಗುವುದು, ನಂತರ ಅವಸರದಲ್ಲಿ ಎದ್ದು ಕೈಕಾಲು ಮುಖ ತೊಳೆಯುವುದು. ಸಾಧ್ಯವಾದರೆ ಎರಡು ಮೂರುದಿನಕ್ಕೊಮ್ಮೆ ಸ್ನಾನ ಮಾಡುವುದು, ನಂತರ ಸರೋಜಮ್ಮನ ಮೆಸ್‌ನಲ್ಲಿ ಅಂದಿನ ಬಾಯಿ ರುಚಿಗೆ ತಕ್ಕಂತೆ ಇಡ್ಲಿ ಇಲ್ಲವೆ ಪೂರಿ ತಿಂದ ಮೇಲೆ ಅರ್ಧ ಪಲಾವ್ ರುಚಿ ನೋಡಿದ ನಂತರವೇ ಆಫೀಸ್ ಗೆ ರೀಚ್ ಆಗುತ್ತಿದ್ದ. ಮಧ್ಯಾಹ್ನ ಅದೇ ಮೆಸ್‌ಗೆ ಬಂದು ಮುದ್ದೆಯೋ ಚಪಾತಿಯೋ ತಿಂದು ಮತ್ತೆ ಕೆಲಸಕ್ಕೆ ಜಾಯ್ನ್ ಆಗುತ್ತಿದ್ದ. ಈ ಮಧ್ಯೆ ನಾಕಾರು ಬಾರಿ ಟಿ ಕುಡಿಯುವುದು ಇದ್ದೆ ಇತ್ತು. ರಾತ್ರಿಗೆ ಯಾರಾದರೂ ಗೆಳೆಯರು ಕರೆದರೆ ಅವರೊಟ್ಟಿಗೆ ಹರಟಿ ರಸ್ತೆ ಬದಿಯಲ್ಲಿ ಎಗ್ ರೈಸ್, ಕಬಾಬ್, ಫಿಷ್ ಫ್ರೈ ಇತ್ಯಾದಿ ಮೇಯ್ದು ತಡವಾಗಿ ಮನೆ ಸೇರಿ ರಗ್ ಎಳೆದುಕೊಂಡು ಮಲಗುವುದು ಕೆಂಪಣ್ಣನ ಇತ್ತೀಚಿನ ದಿನಚರಿಯಾಗಿತ್ತು. ಕೆಂಪಣ್ಣನ ಈ ದಿನಚರಿಯಿಂದ ಆತನಿನ್ನು ಮದುವೆಯಾಗದ ಗುಂಡ್ರುಗೋವಿ ಎಂದು ಕನ್ ಫ್ಯೂಸ್ ಆಗಬಹುದು. ಕಳೆದ ವರ್ಷವಷ್ಟೆ ಮಲ್ಲಿಗೆರೆಯ ಡಿಗ್ರಿ ಓದಿರುವ ಮಾಲತಿಯೊಂದಿಗೆ ಗುರು ಹಿರಿಯರ ಸಮ್ಮುಖದಲ್ಲಿ ಸಂಪ್ರದಾಯಬದ್ಧವಾಗಿ ಅದ್ದೂರಿಯಾಗಿ ಕೆಂಪಣ್ಣನ ಮದುವೆ ನೆರವೇರಿತ್ತು. ಅದರ ಪುರಾವೆಯಂತಿರುವ ಕೆಂಪಣ್ಣ ಮತ್ತು ಮಾಲತಿ ಒಟ್ಟಿಗೆ ಇರುವ ಅದೂ ರಿಸೆಪ್ಷನ್‌ನಲ್ಲಿ ತೆಗೆಸಿರುವ ಫೋಟೊ ಒಂದು ಇತ್ತ ಹಾಲ್‌ನಲ್ಲು, ಒಂಚೂರು ಭಂಗಿ ಬದಲಾಯಿಸಿ ಕೆಂಪಣ್ಣನ ಹೆಗಲ ಮೇಲೆ ಕೈ ಹಾಕಿರುವ ಮಾಲತಿಯ ಇನ್ನೊಂದು ಫೋಟೊ ಬೆಡ್ ರೂಮಿನಲ್ಲು ನೇತಾಡುತ್ತಿತ್ತು. ಪ್ರತಿ ರಾತ್ರಿ ಮಲಗುವಾಗ ಕೆಂಪಣ್ಣ ಅದನ್ನೊಮ್ಮೆ ಕಣ್ತುಂಬಿಕೊಂಡೆ ರಗ್ ಎಳೆದುಕೊಳ್ಳುತ್ತಿದ್ದ. ಮಲಗಿದ ನಂತರವೂ ನೋಡುವಂತಾದರೆ ತನ್ನ ಟಚ್ ಸ್ಕ್ರೀನ್ ಮೊಬೈಲ್‌ನ ಒಮ್ಮೆ ಮೇಲಕ್ಕೆ ಎಳೆದರೆ ಸಾಕು ಮತ್ತೆ ಅಲ್ಲಿ ಪ್ರತ್ಯಕ್ಷಳಾಗುವುದು– ಅದೆ ಮಾಲತಿ ಗದ್ದಕ್ಕೆ ಕೈಕೊಟ್ಟುಕೊಂಡು ಸ್ಮೈಲ್ ಕೊಟ್ಟಿರುವ ಇನ್ನೊಂದು ಚಿತ್ರ.

ಬೆಚ್ಚಗೆ ಹೆಂಡ್ತಿ ಮಗ್ಗುಲಲ್ಲಿ ಜೊತೆಯಾಗಿ ಹಿತವಾಗಿರಬೇಕಿದ್ದ ಕೆಂಪಣ್ಣನಿಗೆ ವರ್ಷ ತುಂಬುವ ಮುನ್ನವೇ ಬಂದೊದಗಿರುವ ಈ ವನವಾಸಕ್ಕೆ ಕಾರಣವಾದರೂ ಏನಿರಬಹುದೆಂದು ಕೆದಕುತ್ತಾ ಹೊರಟರೆ ಅದರ ಮೂಲ ಸೀದ ಕೆಂಪಣ್ಣನ ಹುಟ್ಟೂರಾದ ಬಚ್ಚಲ್ಲೂರಿಗೆ ಹೋಗುತ್ತದೆ.

ಬಚ್ಚಲ್ಲೂರಿನ ಉಜ್ಜಲ್‌ಬಸವನ ಮಗನಿಗೆ ಅಪ್ಪ ಅಮ್ಮ ಇಟ್ಟ ಹೆಸರು ಅವನಿರುವ ಬಣ್ಣಕ್ಕೆ ವಿರುದ್ಧವಾದ ಕೆಂಪರಾಜನಾದರೂ ಊರಲ್ಲಿ ಆತನನ್ನು ಕರೆಯುವುದು ಉಜ್ಜಲ್ ಕೆಂಪ ಎಂದೆ. ಬಚ್ಚಲ್ಲೂರು ಸುತ್ತಮುತ್ತಲೂರಿಗೆಲ್ಲ ಫೇಮಸ್ ಆಗಿರುವುದು ಆ ಊರಿಗೆ ಹೊಂದಿಕೊಂಡತಿರುವ ಬಚ್ಚಲ್ ಗುಡ್ಡದ ಕಾರಣಕ್ಕೆ. ಒಂದು ಮಗ್ಗುಲಿಂದ ನೋಡಿದರೆ ಕೆಂದಗೆ ಕಾಣುವ ಬಚ್ಚಲ್ ಗುಡ್ಡ ಇನ್ನೊಂದು ಮಗ್ಗುಲಿಂದ ಯಾರೊ ಬಗ್ಗಿರುವ ಬೆನ್ನಿನಂತೆ ಕಾಣುತ್ತದೆ. ಈ ಗುಡ್ಡದಿಂದ ಇಲ್ಲಿನ ವಡ್ಡರು ಎಬ್ಬುವ ಚಪ್ಪಡಿಗಳು ಬೇರೆಲ್ಲ ಉಪಯೋಗಗಳಿಗಿಂತ ಬಚ್ಚಲು ಮನೆಗೆ ಅದಿಯುವ ಕಲ್ಲಿಗೆ ಫೇಮಸ್. ಹೊಸ ಮನೆ ಕಟ್ಟುವವರು, ರಿಪೇರಿಗೆ ಬಂದಿರುವ ತಮ್ಮ ಬಚ್ಚಲು ಮನೆಯನ್ನು ದುರಸ್ತಿಗೊಳಿಸುವವರು ಕಡ್ಡಾಯವಾಗಿ